ಕರ್ನಾಟಕ ಸರ್ಕಾರ

# ಸಮಾಜ ಕಲ್ಯಾಣ ಇಲಾಖೆ

ಬೆಳಗಾವಿ ಜಿಲ್ಲೆ

# ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೈಗೊಳ್ಳಲಾದ ಕಾರ್ಯಕ್ರಮಗಳ ವಿವರ ಹಾಗೂ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ ಇವರ ಕಾರ್ಯಾಲಯದ ಮಾಹಿತಿ

# <u>ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ವಿವರಗಳು.</u>

ಜಿಲ್ಲೆಯ ಪರಿಶಿಷ್ಟ ಜಾತಿ ಜನರ ಸರ್ವತೋಮುಖ ಅಭಿವೃದ್ಧಿ ಹೊಂದಲು ಸಮಾಜ ಕಲ್ಯಾಣ ಇಲಾಖೆಯು ಈ ಜನಾಂಗದ ಶೈಕ್ಷಣಿಕ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿ ಹೊಂದಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಇದಲ್ಲದೇ ಸಾಮಾಜಿಕ ಭದ್ರತೆ ಹಾಗೂ ಮೀಸಲಾತಿಯನ್ನು ಕಾಪಾಡಲು ಸಹ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರ ಪರಿಶಿಷ್ಟ ಜಾತಿ ಉಪಯೋಜನೆಯಡಿ ಅನುಷ್ಠಾನ ಮಾಡುವ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸುವ ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ.

| **ಕ್ರ.ಸಂ** | **ವಿವರ** | **ಸಂಸ್ಥೆಗಳ ಸಂಖ್ಯೆ (ವಿವರ)** |
|---|---|---|
| 1 | ಶೈಕ್ಷಣಿಕ ಅಭಿವೃದ್ಧಿಗಾಗಿ | • 3 ವಸತಿ ಶಾಲೆ / ಆಶ್ರಮ ಶಾಲೆ 1 ರಿಂದ 5ನೇ ತರಗತಿ<br>• 12 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು 6ರಿಂದ 10ನೇ ತರಗತಿಯ ವರೆಗೆ<br>• 4 ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳು 6ರಿಂದ 10ನೇ ತರಗತಿಯ ವರೆಗೆ ( ಹೆಣ್ಣು ಮಕ್ಕಳಿಗಾಗಿ)<br>• ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಲು ಇಲಾಖೆಯಿಂದ ಆಯ್ಕೆ ಮಾಡಿರುವ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ<br>• 66 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು<br>• 28 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು<br>• 5 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಅನುದಾನ<br>• ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿ (ರಾಜ್ಯ ಸರ್ಕಾರ ಕಾರ್ಯಕ್ರಮ 1 ರಿಂದ 8ನೇ ತರಗತಿಯವರೆಗೆ, ಡೇ ಸ್ಕಾಲರ್‌ಶಿಪ್)<br>• ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿ (ಕೇಂದ್ರ ಸರ್ಕಾರ ಕಾರ್ಯಕ್ರಮ 9 ಮತ್ತು 10ನೇ ತರಗತಿಯವರೆಗೆ, ಡೇ ಸ್ಕಾಲರ್ಸ್ ಮತ್ತು ಹಾಸ್ಟೆಲ ವಿದ್ಯಾರ್ಥಿಗಳಿಗೆ)<br>• ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿ (ಕೇಂದ್ರ ಸರ್ಕಾರ ಕಾರ್ಯಕ್ರಮ ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪಾಲಕರ ಮಕ್ಕಳಿಗೆ ನಿರ್ವಹಣಾ ವೆಚ್ಚ 1 ಮತ್ತು 10ನೇ ತರಗತಿಯವರೆಗೆ ಡೇ ಸ್ಕಾಲರ್ಸ್ ಹಾಗೂ 3ರಿಂದ 10ನೇ ತರಗತಿಯವರೆಗೆ ಹಾಸ್ಟೆಲ ವಿದ್ಯಾರ್ಥಿಗಳಿಗೆ)<br>• ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರಾತಿ<br>• ಬಹುಮಾನ ಧನ ಮಂಜೂರಾತಿ : ಎಸ್.ಎಸ್.ಎಲ್.ಸಿ/ ಪಿ.ಯು.ಸಿ/ ಪದವಿ/ ಸ್ನಾತಕೋತ್ತರ/ ತಾಂತ್ರಿಕ/ ವೈದ್ಯಕೀಯ/ಕೃಷಿ/ ಪಶು ಸಂಗೋಪನೆ<br>• ಕಾನೂನು ಪದವಿದರರಿಗೆ (ನಾಲ್ಕು ವರ್ಷದ ಕಾನೂನು ತರಬೇತಿ) ಶಿಷ್ಯವೇತನ ಹಾಗೂ ಸಹಾಯಧನ<br>• ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿ ಓದುತ್ತಿರುವ ಉಪಯೋಗಕ್ಕೆ ಕಾಲೇಜುಗಳಲ್ಲಿ ಬುಕ್‌ಬ್ಯಾಂಕ್ ಸ್ಥಾಪನೆ |

| | | |
|---|---|---|
| 2 | ಆರ್ಥಿಕ ಅಭಿವೃದ್ದಿಗಾಗಿ | ಎಲ್ಲ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಡಾ. ಬಿ. ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ ಅನುಷ್ಠಾನ ಮಾಡಲಾಗುತ್ತಿದೆ<br>• ಭೂ ಒಡೆತನ ಯೋಜನೆ<br>• ಗಂಗಾ ಕಲ್ಯಾಣ ಯೋಜನೆ (ವೈಯಕ್ತಿಕ ಮತ್ತು ಸಾಮೂಹಿಕ)<br>• ಸ್ವಯಂ ಉದ್ಯೋಗ ಯೋಜನೆ<br>• ಮೈಕ್ರೋ ಪಾಯನಾನ್ಸ ಲೋನ್ ಸ್ಕೀಮ್<br>• SCA to SCSP ಅನುದಾನದಲ್ಲಿ ಪ.ಜಾತಿಯ ವಿಕಲಚೇತನರಿಗೆ ಆರ್ಥಿಕ ಸಹಾಯಧನ ಮತ್ತು ಸಾಲ<br>• SCA to SCSPಅನುದಾನದಲ್ಲಿ ಪ.ಜಾತಿಯ ಹೆಣ್ಣು ಮಕ್ಕಳು ಕೈಗೊಳ್ಳುವ ಆದಾಯ ತರುವ ಚಟುವಟಿಕೆಗಳಿಗೆ ಸಹಾಯಧನ ಮತ್ತು ಸಾಲ ಮತ್ತು ಇತರ ಸ್ವಯಂ ಉದ್ಯೋಗ ಯೋಜನೆಗಳು |
| 3 | ಕೌಶಲ್ಯ ತರಬೇತಿ | • ಜಿ. ಎನ್. ಎಮ್ ಮತ್ತು ಬಿ.ಎಸ್ಸಿ ನರ್ಸಿಂಗ್ ಕೋರ್ಸುಗಳಲ್ಲಿ ವಿದ್ಯಾಭ್ಯಾಸ ಮಾಡಲು ನಿಯೋಜಿಸುವುದು<br>• ಪ್ಯಾರಾ ಮೆಡಿಕಲ್ ಕೋರ್ಸುಗಳಲ್ಲಿ ವಿದ್ಯಾಭ್ಯಾಸ ಮಾಡಲು ನಿಯೋಜಿಸುವುದು<br>• CIPETಮೈಸೂರಿನಲ್ಲಿ ತರಬೇತಿ<br>• IAS/ IPS/KAS/IBPS ಪರೀಕ್ಷೆಗಳಿಗೆ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಗೆ ನಿಯೋಜನೆ<br>• ಇತರೆ ತರಬೇತಿಗಳು |
| 4 | ಸಾಮಾಜಿಕ ಭದ್ರತೆ | • PCR ACT 1955 & POA ACT 1989 ಅನುಷ್ಠಾನ<br>• ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರರಿಗೆ ಪರಿಹಾರ ಧನ ಮಂಜೂರಾತಿ/ ಪುನರ್ವಸತಿ ಕಾರ್ಯಕ್ರಮಗಳ ಅನುಷ್ಠಾನ/ ಕೊಲೆ ಪ್ರಕರಣಗಳಲ್ಲಿ ನೊಂದ ಕುಟುಂಬದ ಅವಲಂಬಿತ ಸದಸ್ಯರಿಗೆ ಅನುಕಂಪನದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡುವುದು<br>• ಅಂತರಜಾತಿ ವಿವಾಹ ದಂಪತಿಗಳಿಗೆ ಪ್ರೋತ್ಸಾಹ ಧನ<br>• PCR ACT 1955 & POA ACT 1989 ಬಗ್ಗೆ ವಿಚಾರ ಸಂಕಿರಣ ಮತ್ತು ಕಮ್ಮಟಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮದ ಅನುಷ್ಠಾನ |

# ಇಲಾಖೆ ನಡೆಸುತ್ತಿರುವ ಸಂಸ್ಥೆಗಳಲ್ಲಿ ಸರ್ಕಾರ ನೀಡುತ್ತಿರುವ ಉಚಿತ ಸೌಲಭ್ಯಗಳ ವಿವರ

| ಕ್ರ.ಸಂ | ಸೌಲಭ್ಯಗಳ ವಿವರ | ವಸತಿ ಶಾಲೆಗಳು 1 ರಿಂದ 5ನೇ ತರಗತಿ | ಮೊ.ದೇ./ಕಿ.ರಾ.ಚ ವಸತಿ ಶಾಲೆಗಳು 6 ರಿಂದ 10 | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು |
|---|---|---|---|---|---|
| 1 | ಅಹಾರ ವೆಚ್ಚ | @ ರೂ 800/– P.M / P.S | @ ರೂ 1100/– P.M/P. S | @ ರೂ 1000/– P.M/P.S | @ ರೂ 1100/– P.M/P.S |
| 2 | ಸಮವಸ್ತ್ರ | @ ರೂ 400/– P.A /P.S | @ ರೂ 800/– P.A /P. S (6 & 7 Std)<br>@ ರೂ 1000/– P.A /P. S (8 to10 Std) | @ ರೂ 800/– P.A /P.S | – |
| 3 | ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ | @ ರೂ 40/– P.A /P.S | @ ರೂ 500/– P.A /P. S (6 & 7 Std)<br>@ ರೂ 700/– P.A /P. S (8 to10 Std) | @ ರೂ 250/– P.A /P.S | – |
| 4 | ಇತರೆ ಸಾಮಗ್ರಿ (ಶುಚಿ ಸಂಭ್ರಮ ಕಿಟ್) | @ ರೂ 15/– P.M /P.S | @ ರೂ 72/– P.M &@ ರೂ 89/– P.M For Boys & Girls | @ ರೂ 60.50/– P.M & @ ರೂ 72/– P.M For Boys & Girls | – |
| 5 | ತಲೆ ಕ್ಷೌರ | @ ರೂ 12/– P S | @ ರೂ 150/– P.A /P. S | @ ರೂ 150/– P.A /P. S | – |
| 6 | ಸುದ್ದಿ ಪತ್ರಿಕೆ | – | @ ರೂ 2500/– P.A /P.School | @ ರೂ 3000/– P.A /P. Hostel | @ ರೂ 3500/– P.A /P. Hostel |
| 7 | ವೈದ್ಯಕೀಯ | @ ರೂ 5/– P.A /P.S | @ ರೂ 10000/– P.A /P.School | @ ರೂ 5000/– P.A /P. Hostel | – |
| 8 | ಅರೆಕಾಲಿಕ 3 ಬೋಧಕರ ಗೌರವಧನ | – | – | @ ರೂ 1000/– P. M (6 Months) | – |
| 9 | ಶೌಚಾಲಯ ಸ್ವಚ್ಚತೆಗೆ | @ ರೂ 600/– P.M/ P.School | @ ರೂ 3000/– P.M/ P.School | @ ರೂ 2000/– P.M/ P. Hostel | @ ರೂ 2000/– P.M/ P. Hostel |
| 10 | ಹಾಸಿಗೆ ಹೊದಿಕೆ | @ ರೂ 400/– 3 y/ P. Hostel | – | @ ರೂ 800/– 3 y/ P. Hostel | @ ರೂ 1000/– 3 y/ P. Hostel |
| 11 | ಕ್ರೀಡಾ ಸಾಮಗ್ರಿಗಳು | – | – | @ ರೂ 20000/–2 y/ P. Hostel | @ ರೂ 20000/– 2 y/ P. Hostel |
| 12 | ಸೆಪ್ಟಿಂಕ್ ಟ್ಯಾಂಕ್ ಸ್ವಚ್ಚತೆ | – | – | @ ರೂ 5000/– P.A /P. Hostel | @ ರೂ 5000/– P.A /P. Hostel |
| 13 | ಕೆಟ್ಟು ಹೋದ ಸಾಮಗ್ರಿ ರೀಪೇರಿ | – | – | @ ರೂ 5000/– P.A /P. Hostel | @ ರೂ 5000/– P.A /P. Hostel |
| 14 | ಶೌಚಾಲಯ ಸ್ವಚ್ಚತೆಗಾಗಿ ಖರೀದಿ ಸಾಮಗ್ರಿಗಳು | – | – | @ ರೂ 750/– P.A /P. Hostel | @ ರೂ 1000/– P.A /P. Hostel |

- ಇದಲ್ಲದೇ ನಿಲಯಾರ್ಥಿಗಳಿಗೆ ಮಂಚಗಳು,ಟ್ರಂಕ್, ತಟ್ಟೆ, ಲೋಟ, ಗ್ರಂಥಾಲಯ ಪುಸ್ತಕಗಳು ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ

# ವಿದ್ಯಾರ್ಥಿ ವೇತನದ ಮಂಜೂರಾತಿ ದರಗಳ ವಿವರ

## 1. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ರಾಜ್ಯ ಸರ್ಕಾರ ಕಾರ್ಯಕ್ರಮ 1 ರಿಂದ 8ನೇ ತರಗತಿಯವರೆಗೆ, ಡೇ ಸ್ಕಾಲರ್‌ಶಿಪ್)

| ತರಗತಿ | ಬಾಲಕರು | ಬಾಲಕಿಯರು | 2014-15ನೇ ಸಾಲಿನಲ್ಲಿ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಸಂಖ್ಯೆ | 2015-16ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಭೌತಿಕ ಗುರಿ |
|---|---|---|---|---|
| 1 ರಿಂ 5 | ರೂ. 400/- P.A /P.S | ರೂ. 450/- P.A /P.S | 53565 | 80000 |
| 6 ರಿಂದ 10 | ರೂ. 400/- P.A /P.S | ರೂ. 550/- P.A /P.S | | |
| 8ನೇ ತರಗತಿ | ರೂ. 650/- P.A /PS | ರೂ. 900/- P.A /P.S | | |

- 2014-15ನೇ ಸಾಲಿನಲ್ಲಿ 53565 ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸ್ವೀಕರಿಸಿ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ.

## 2. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇಂದ್ರ ಸರ್ಕಾರ ಕಾರ್ಯಕ್ರಮ 9 ಮತ್ತು 10ನೇ ತರಗತಿಯವರೆಗೆ ಮಾತ್ರ)

| ವಿವರ | ಡೇ ಸ್ಕಾಲರ್ಸ್ ದರ | ಹಾಸ್ಟೆಲರ್ಸ್ ದರ | 2014-15ನೇ ಸಾಲಿನಲ್ಲಿ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಸಂಖ್ಯೆ | 2015-16ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಭೌತಿಕ ಗುರಿ |
|---|---|---|---|---|
| ನಿರ್ವಹಣೆ ವೆಚ್ಚಕ್ಕಾಗಿ | @ ರೂ. 150/- P. M 10 ತಿಂಗಳಿಗೆ (ರೂ.1500/- P.A) | @ ರೂ. 350/- P. M 10 ತಿಂಗಳಿಗೆ (ರೂ.3500/- P.A) | 5637 | 10000 |
| ಅಡಾಕ್ ಗ್ರ್ಯಾಂಟ್ | ರೂ.750/- P.A | ರೂ.1000/- P.A | | |
| ಒಟ್ಟು | ರೂ. 2250/- P.A /P.S | ರೂ. 4500/- P.A /P.S | | |

- 2014-15ನೇ ಸಾಲಿನಲ್ಲಿ 5637 ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸ್ವೀಕರಿಸಿ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ.

## 3. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ  (ಕೇಂದ್ರ ಸರ್ಕಾರ ಕಾರ್ಯಕ್ರಮ ಅಸ್ವಚ್ಛ ವೃತ್ತಿಯ ಪಾಲಕರ ಮಕ್ಕಳಿಗೆ)

| ವಿವರ | ಡೇ ಸ್ಕಾಲರ್ಸ್ ದರ<br>1 ರಿಂದ 10 ನೇ ತರಗತಿ | ಹಾಸ್ಟೆಲರ್ಸ್ ದರ<br>3 ರಿಂದ 10 ನೇ ತರಗತಿ | 2014-15ನೇ ಸಾಲಿನಲ್ಲಿ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಸಂಖ್ಯೆ | 2015-16ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಭೌತಿಕ ಗುರಿ |
|---|---|---|---|---|
| ನಿರ್ವಹಣೆ ವೆಚ್ಚಕ್ಕಾಗಿ | @ ರೂ. 110/- P. M<br>10 ತಿಂಗಳಿಗೆ<br>(ರೂ.1100/- P.A) | @ ರೂ. 700/- P. M<br>10 ತಿಂಗಳಿಗೆ<br>(ರೂ.7000/- P.A) | 05 | 20 |
| ಅಡಾಕ್ ಗ್ರ್ಯಾಂಟ್ | ರೂ.750/- P.A | ರೂ.1000/- P.A | | |
| ಒಟ್ಟು | ರೂ. 1850/- P.A /P.S | ರೂ. 8000/- P.A /P.S | | |

## 4. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಕೇಂದ್ರ ಸರ್ಕಾರ ಕಾರ್ಯಕ್ರಮ)

| ಗ್ರೂಪ್ | ಕೋರ್ಸುಗಳು | ಡೇ ಸ್ಕಾಲರ್ಸ ದರ (G.O.I) | ಹಾಸ್ಟೆಲರ್ಸ ದರ | | ಒಟ್ಟು |
|---|---|---|---|---|---|
| | | | G.O.I | E.B.L G.O.K | |
| I | ಪದವಿ/ ಸ್ನಾತಕೋತ್ತರ/ ಬಿ.ಇ, ಎಂ.ಬಿ.ಬಿ.ಎಸ್, ಎಂ.ವಿ.ಎಸ್.ವಿ ಬಿ.ವಿ.ಎಸ್.ಸಿ | @ ರೂ 550/- P.M | @ ರೂ.1200/- P.M | - | ರೂ 1200/- |
| I I | ವೃತ್ತಿಪರ ಮತ್ತು ತಾಂತ್ರಿಕ ( ಎಂ.ಫಿಲ್, ಪಿ.ಹೆಚ್‌ಡಿ ಹಾಗೂ ಡಿಪ್ಲೋಮಾ ) | @ ರೂ 530/- P.M | @ ರೂ.820/- P.M | @ ರೂ.180/- P.M | ರೂ.1000/- |
| I I I | ಪದವಿ ಹಾಗೂ ಪದವಿ ನಂತರದ ಎಲ್ಲ ಕೋರ್ಸುಗಳು (ಗ್ರೂಪ್ I &I I ನ್ನು ಹೊರತುಪಡಿಸಿ) | @ ರೂ 300/- P.M | @ ರೂ.570/- P.M | @ ರೂ.430/- P.M | ರೂ.1000/- |
| IV | ಎಲ್ಲ ಪದವಿ ಪೂರ್ವ ಕೋರ್ಸುಗಳು ಐ.ಟಿ.ಐ, ವೊಕೇಶನಲ್ ಕೋರ್ಸು | @ ರೂ 230/- P.M | @ ರೂ.380/- P.M | @ ರೂ.620/- P.M | ರೂ.1000/- |

- ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನ ಮಿತಿ 2.50 ಲಕ್ಷಗಳು.

- **<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು :</u>**

ಜಿಲ್ಲೆಯಲ್ಲಿ 51 ಬಾಲಕರ ಹಾಗೂ 15 ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ನಡೆಯುತ್ತಿವೆ. ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಶೇ.75 ಪರಿಶಿಷ್ಟ ಜಾತಿ ಹಾಗೂ ಶೇ.25 ಪರಿಶಿಷ್ಟ ವರ್ಗಗಳ ಮತ್ತು ಇತರೆ ಜಾತಿಯ ವಿದ್ಯಾರ್ಥಿಗಳನ್ನು ತುಂಬಿಕೊಳ್ಳಲಾಗುವುದು. ಪ್ರತಿ ವರ್ಷ ಖಾಲಿ ಇರುವ ಸ್ಥಳಗಳಿಗೆ ವಸತಿನಿಲಯಗಳಿರುವ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಆಯ್ಕೆ ಸಮಿತಿ ಸಭೆಯಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಊಟ, ವಸತಿ ಪಠ್ಯಪುಸ್ತಕ, ಲೇಖನಿ ಸಾಮಗ್ರಿ ಇತರೆ ವಸ್ತುಗಳ ಸಮವಸ್ತ್ರ, ಅರೆಕಾಲಿಕ ಬೋಧಕರಿಂದ ಪಾಠ ಬೋಧನೆ ಇತ್ಯಾದಿ ಉಚಿತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- **<u>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು :</u>**

ಜಿಲ್ಲೆಯಲ್ಲಿ 19 ಬಾಲಕರ ಮತ್ತು 9 ಬಾಲಕಿಯರ ವಿದ್ಯಾರ್ಥಿನಿಲಯಗಳು ಇದ್ದು ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಊಟ, ವಸತಿ ಮತ್ತು ಗ್ರಂಥಾಲಯ ವ್ಯವಸ್ಥೆಯನ್ನು ಮಾಡಿಕೊಡಲಾಗುತ್ತದೆ. ಪ್ರತಿ ವರ್ಷ ಖಾಲಿ ಇರುವ ಸ್ಥಳಗಳಿಗೆ ಅರ್ಜಿಗಳನ್ನು ಆಹ್ವಾನಿಸಿ ವಿದ್ಯಾರ್ಥಿ ನಿಲಯಗಳು ಇರುವ ವಿಧಾನಸಭಾ ಕ್ಷೇತದ್ರ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಮುಖಾಂತರ ವಿದ್ಯಾರ್ಥಿಗಳ ಅರ್ಹತೆ ಆಧಾರದ ಮೇಲೆ ಮತ್ತು ಭಾರತ ಸರ್ಕಾರ ಶಿಷ್ಯ ವೇತನ ಪಡೆಯಲು ಅರ್ಹ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರ ವಸತಿ ನಿಲಯ ಸೌಲಭ್ಯ ಕಲ್ಪಿಸಲಾಗುತ್ತಿದೆ.

- **<u>ಆಶ್ರಮ ಶಾಲೆಗಳು:</u>**

**<u>ಆಶ್ರಮ</u>** ಶಾಲೆಗಳಲ್ಲಿ 1 ರಿಂದ 5 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವದು.ಈ ಶಾಲೆಗಳಲ್ಲಿ ಶೇ.75 ಪರಿಶಿಷ್ಟ ಜಾತಿ ಹಾಗೂ ಶೇ.25 ಪ.ವ ಮತ್ತು ಇತರೆ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ.ವಸತಿ ಶಾಲೆಗಳಲ್ಲಿ ಊಟ, ವಸತಿ, ಪಠ್ಯ ಪುಸ್ತಕ ಸಮವಸ್ತ್ರ, ಹಾಸಿಗೆ ಹೊದಿಕೆ ಉಚಿತವಾಗಿ ಪೂರೈಸುವದರೊಂದಿಗೆ ಶಿಕ್ಷಣ ಸಹ ನೀಡಲಾಗುತ್ತಿದೆ.ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 03 ಆಶ್ರಮ ಶಾಲೆಗಳು ಇರುತ್ತವೆ.

- **<u>ಮೆಟ್ರಿಕ್ ಪೂರ್ವ ಶಿಷ್ಯವೇತನ :</u>**

ಪರಿಶಿಷ್ಟ ಜಾತಿಯ 1 ರಿಂದ 10ನೇ ವರ್ಗದವರೆಗೆ ಓದುವ ಎಲ್ಲಾ ವಿದ್ಯಾರ್ಥಿಗಳಿಗೆ ಮೆಟ್ರಿಕ ಪೂರ್ವ ಶಿಷ್ಯವೇತನವನ್ನು ಈ ಇಲಾಖೆಯಿಂದ ಆನ್‌ಲೈನ್ ಮುಖಾಂತರ ಮಂಜೂರು ಮಾಡಲಾಗುತ್ತಿದೆ. ಶಿಷ್ಯ ವೇತನ ದರಗಳು ಈ ಕೆಳಗಿನಂತಿವೆ.

| ಕ್ರ.ಸಂ | ವರ್ಗ | ಗಂಡು | ಹೆಣ್ಣು |
|---|---|---|---|
| 1 | 1 ರಿಂದ 5 | 400=00 | 450=00 |
| 2 | 6 ರಿಂದ 7 | 400=00 | 250=00 |
| 3 | 8 ರಿಂದ 10 | 650=00 | 900=00 |

- **<u>ಮೆಟ್ರಿಕ್ ನಂತರದ (ಭಾರತ ಸರ್ಕಾರದ) ಶಿಷ್ಯವೇತನ :</u>**

ಮೆಟ್ರಿಕ್ ನಂತರದ ಎಲ್ಲ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅವರು ಓದುತ್ತಿರುವ ಕಾಲೇಜುಗಳಿಂದ ಅರ್ಜಿಗಳನ್ನು ಪಡೆದು ಭಾರತ ಸರ್ಕಾರದ ಶಿಷ್ಯವೇತನವನ್ನು ಆನ್‌ಲೈನ್ ಮೂಲಕ ಮಂಜೂರು ಮಾಡಿ ಆಯಾ ಕಾಲೇಜು ಪ್ರಾಂಶುಪಾಲರ ಮುಖಾಂತರ ವಿತರಿಸಲಾಗುತ್ತಿದೆ.

- ವಿದ್ಯಾರ್ಥಿಯು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.
- ತಂದೆ/ತಾಯಿ : ಕುಟುಂಬದ ಆದಾಯ ಮಿತಿ ಎಲ್ಲ ಮೂಲಗಳಿಂದ ₹.2.50 ಲಕ್ಷಕ್ಕೆ ಮೀರಿರಬಾರದು.
- ಪ್ರತಿ ಕುಟುಂಬದಲ್ಲಿ 2 ಗಂಡು ಮಕ್ಕಳಿಗೆ ಮಾತ್ರ ಕುಟುಂಬದ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಷ್ಯವೇತನವನ್ನು ಮಂಜೂರು ಮಾಡಲಾಗುವುದು.

2010–11 ನೇ ಸಾಲಿನಿಂದ (1–7–2010ರಿಂದ) ಮಂಜೂರು ಮಾಡಲಾಗುತ್ತಿರುವ ಹೊಸ ಪರಿಷ್ಕೃತ ಮೆಟ್ರಿಕ್ ನಂತರದ ಶಿಷ್ಯವೇತನ (ನಿರ್ವಹಣೆ) ದರಗಳು ಈ ಕೆಳಗಿನಂತಿರುತ್ತವೆ.

| ಗ್ರೂಪ್ | ಡೇ ಸ್ಕಾಲರ್ | ಹಾಸ್ಟೆಲ್ |
|---|---|---|
| 1 | 550 | 1200 |
| 2 | 530 | 820 |
| 3 | 300 | 570 |
| 4 | 230 | 380 |

ನಿರ್ವಹಣೆ ಭತ್ಯೆಯೊಂದಿಗೆ ಕಾಲೇಜುಗಳ ಕಡ್ಡಾಯ ಶುಲ್ಕವನ್ನು ಸಹ ಮಂಜೂರು ಮಾಡಲಾಗುವುದು.

- **<u>ಅನೈರ್ಮಲ್ಯ ವೃತ್ತಿಯ ಪಾಲಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ಶಿಷ್ಯ ವೇತನ:</u>**

ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪಾಲಕರ ಮಕ್ಕಳು ಶಾಲೆಗೆ ಹೋಗುವ ಪ್ರವೃತ್ತಿ ಬೆಳೆಸಲು ವಿದ್ಯಾರ್ಥಿನಿಲಯ ವಾಸಿಗಳಲ್ಲದವರಿಗೆ 1 ರಿಂದ 5ನೇ ತರಗತಿಯವರಿಗೆ ಪ್ರತಿ ತಿಂಗಳಿಗೆ ₹.40–00 ರಂತೆ 6 ರಿಂದ 8ನೇ ತರಗತಿಯವರಿಗೆ ಪ್ರತಿ ತಿಂಗಳಿಗೆ ₹.60–00 ಮತ್ತು 9 ರಿಂದ 10 ತರಗತಿಯವರಿಗೆ ಪ್ರತಿ ತಿಂಗಳಿಗೆ ₹.75–00 ರಂತೆ ಒಟ್ಟು 10 ತಿಂಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

- **<u>ಬಹುಮಾನ ಧನ :</u>**

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಪ.ಜಾತಿ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಮೇರೆಗೆ ಈ ಕೆಳಕಾಣಿಸಿದಂತೆ ಬಹುಮಾನಧನ ಮಂಜೂರು ಮಾಡಲಾಗುತ್ತಿದೆ. (ಅಂತಿಮ ಕೋರ್ಸಿಗೆ ಮಾತ್ರ)

1) ಪಿ.ಯು.ಸಿ–2 ಮತ್ತು ಡಿಪ್ಲೋಮಾ ₹.750–00
2) ಬಿ.ಎ.ಬಿ.ಕಾಂ.ಬಿಎಸ್.ಸಿ–3 ₹.1000–00
3) ಎಂ.ಎ.ಎಂ.ಎಸ್.ಸಿ.ಎಂ.ಕಾಂ ₹.1250–00
4) ತಾಂತ್ರಿಕ ಪದವಿ ₹.1500–00
5) ವೈದ್ಯಕೀಯ ಪದವಿ ₹.1500–00
6) ಕೃಷಿ ಮತ್ತು ಪಶುಸಂಗೋಪನೆ ₹.1500–00

- **<u>ಬುಕ್ ಬ್ಯಾಂಕ್ :</u>**

ಈ ಯೋಜನೆಯಡಿ ವೈದ್ಯಕೀಯ,ಇಂಜನೀಯರಿಂಗ್ ಮತ್ತು ಎಂ.ಬಿ.ಎ ಹಾಗೂ ಇತರ ವೃತ್ತಿಪರ ಕೋರ್ಸುಗಳು ನಡೆಯುತ್ತಿರುವ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸಿ ಕೊಡುವ ಕುರಿತು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೇಂದ್ರ ಪುರಸ್ಕೃತ ಯೋಜನೆಯಡಿ ಪಠ್ಯ ಪುಸ್ತಕಗಳನ್ನು ಹಾಗೂ ಗ್ರಂಥಾಲಯ ಪುಸ್ತಕಗಳನ್ನು ಖರೀದಿಸಿ ಕೊಡಲಾಗುತ್ತಿದೆ.

- **<u>ಕಾನೂನು ಪದವೀಧರರಿಗೆ ತರಬೇತಿ ಮತ್ತು ಸಹಾಯಧನ :</u>**

ಪರಿಶಿಷ್ಟ ಜಾತಿ ಕಾನೂನು ಪದವೀಧರರು ವಿದ್ಯಾಭ್ಯಾಸ ಮುಗಿಸಿದ ನಂತರ ಅವರ ವೃತ್ತಿ ಪ್ರಾರಂಭಿಸುವ ಮೊದಲು ಕೆಲವು ವರ್ಷಗಳ ತರಬೇತಿಯನ್ನು ನೀಡಿ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಆರಂಭಿಸಲು ಅನುಕೂಲ ಮಾಡಿಕೊಡಲಾಗುವುದು.ಪರಿಶಿಷ್ಟ ಜಾತಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯಲ್ಲಿ ತೊಡಗಲು ಸಹಾಯವಾಗುವಂತೆ ತರಬೇತಿಗೆ ನಿಯೋಜಿಸಿ ಮಾಹೆಯಾನ ₹.2000–00ಗಳ ಪ್ರಕಾರ 4 ವರ್ಷಗಳ ಕಾಲ ಶಿಷ್ಯವೇತನ ನೀಡಲಾಗುವುದು.ಪ್ರತಿ ವರ್ಷ ಸದರಿ ತರಬೇತಿಗೆ ಆಯ್ಕೆ ಮಾಡಲು ಅರ್ಹ ಕಾನೂನು ಪದವೀಧರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಮುಖಾಂತರ ಪ್ರತಿ ವರ್ಷ ನಿಗದಿಪಡಿಸಿದ ಭೌತಿಕ ಗುರಿಗನುಗುಣವಾಗಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.
ಪರಿಶಿಷ್ಟ ಜಾತಿ ಕಾನೂನು ಪಧವೀಧರರಿಗೆ ₹.5000/–ಗಳ ಸಹಾಯಧನ ಮಂಜೂರುಮಾಡಿ ಅದರಲ್ಲಿ ₹.460–00 ನೊಂದಣಿ ಶುಲ್ಕ ಹಾಗೂ ₹.4540/–ಗಳಿಂದ ಕಾನೂನು ಪುಸ್ತಕಗಳನ್ನು ಖರೀದಿಸಿ ಕೊಡಲಾಗುವುದು.

- **<u>ಅಸ್ಪೃಶ್ಯತಾ ನಿವಾರಣ ಮತ್ತು ಅಂತರಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹ ಧನ</u>**

ಅಸ್ಪೃಶ್ಯತಾ ನಿವಾರಣೆ ಯೋಜನೆಯಡಿ ಅಂತರ ಜಾತಿ ವಿವಾಹಿತರಾದ ದಂಪತಿಗಳಿಗೆ ₹.50,000–00 ಪ್ರೋತ್ಸಾಹ ಧನ ಮಂಜೂರ ಮಾಡಲಾಗುತ್ತಿದೆ. ಈ ಯೋಜನೆಯಡಿ ದಂಪತಿಗಳು ಹಿಂದುಗಳಾಗಿದ್ದು, ಇವರಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಮತ್ತು ವಾರ್ಷಿಕ ಆದಾಯ ₹.50000–00 ಒಳಗಡೆ ಇರುವ ದಂಪತಿಗಳು ಪ್ರೋತ್ಸಾಹ ಧನಕ್ಕೆ ಅರ್ಹರಿರುತ್ತಾರೆ.

## ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೆಳಗಾವಿರವರ ಕಾರ್ಯಾಲಯ ಬೆಳಗಾವಿ

## <u>2011–12ನೇ ಸಾಲಿನಿಂದ 2014–15ನೇ ಸಾಲಿನವರೆಗೆ ಅಂತರಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಿದ ವಿವರ</u>

| ವರ್ಷ | ಮಂಜೂರು ಮಾಡಿದ ದಂಪತಿಗಳ ಸಂಖ್ಯೆ | ಮಂಜೂರು ಮಾಡಿದ ಮೊತ್ತ (ರೂ. ಲಕ್ಷಗಳಲ್ಲಿ) | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|
| **2011–12** | 33 | 15.50 | 00 |
| **2012–13** | 24 | 12.00 | 00 |
| **2013–14** | 49 | 24.50 | 00 |
| **2014–15** | 48 | 24.50 | 00 |

1. ಸರಕಾರಿ ಆದೇಶ ಸಂಖ್ಯೆ:ಸಕಇ 63 ಎಸ್‌ಎಲ್‌ಪಿ 2007, ದಿ:03–11–2007 ರನ್ವಯ ಅಂತರಜಾತಿ ವಿವಾಹಿತ ದಂಪತಿಗಳಿಗೆ ರೂ.50000 ಗಳ ಪ್ರೊತ್ಸಾಹ ಧನವನ್ನು 4 ಕಂತಗಳಲ್ಲಿ ವಿತರಿಸಲಾಗುತ್ತಿತ್ತು.
2. ಸರಕಾರಿ ಆದೇಶ ಸಂಖ್ಯೆ:ಸಕಇ 52 ಎಸ್‌ಎಲ್‌ಪಿ 2009, ದಿ:04–10–2012 ರನ್ವಯ ಅಂತರಜಾತಿ ವಿವಾಹಿತ ದಂಪತಿಗಳಿಗೆ ರೂ.50000 ಗಳ ಪ್ರೊತ್ಸಾಹ ಧನವನ್ನು 2 ಕಂತಗಳಲ್ಲಿ ವಿತರಿಸಲಾಗುತ್ತಿದೆ.
3. ಸರಕಾರಿ ಆದೇಶ ಸಂಖ್ಯೆ:ಸಕಇ 113 ಎಸ್‌ಎಲ್‌ಪಿ 2014, ದಿ:27–06–2014 ರನ್ವಯ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ಅಂತರಜಾತಿ ವಿವಾಹವಾದಲ್ಲಿ ರೂ.1.00 ಲಕ್ಷಗಳನ್ನು, ಹಾಗೂ ಪರಿಶಿಷ್ಟ ಜಾತಿಯ ಗಂಡುಮಕ್ಕಳು ಅಂತರಜಾತಿ ವಿವಾಹವಾದಲ್ಲಿ ರೂ.50000 ಗಳ ಪ್ರೊತ್ಸಾಹಧನವನನ್ನು ವಿತರಸಿಲಾಗುತ್ತಿದೆ.

- **ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರಧನ.**

  ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ದೌರ್ಜನ್ಯದ ತೀವ್ರತೆ ಮತ್ತು ಅದರ ಸ್ವರೂಪವನ್ನನುಸರಿಸಿ ₹.15,000=00 ದಿಂದ ₹.5,00,000=00 ಗಳವರೆಗೆ ಪರಿಹಾರಧನ ವಿತರಿಸಲಾಗುತ್ತಿದೆ. ದೌರ್ಜನ್ಯ ಪ್ರಕರಣಗಳಲ್ಲಿ ಮೃತಪಟ್ಟವರ ಅವಲಂಬಿತ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಲಾಗುತ್ತಿದೆ.

- **ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸಹಾಯಧನ.**

  ಈ ಯೋಜನೆಯಡಿ ಪರಿಶಿಷ್ಟ ಜಾತಿ ಜನರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ಸ್ವಯಂ ಉದ್ಯೋಗ ಹೊಂದಲು ಜಿಲ್ಲಾ ಪಂಚಾಯತ್ ಸಹಕಾರದೊಂದಿಗೆ ಜಿಲ್ಲಾ ವಲಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ, ಸಹಕಾರ ಮುಂತಾದ ಇಲಾಖೆಗಳ ಮೂಲಕ ಸಹಾಯಧನವನ್ನು ಒದಗಿಸಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

- **ನರ್ಸಿಂಗ್ ತರಬೇತಿ:**

  ಪರಿಶಿಷ್ಟ ಜಾತಿ ಉಪಯೋಜನೆಯಡಿ ಪರಿಶಿಷ್ಟ ವಿದ್ಯಾರ್ಥಿಗಳಿಗೆ ವೃತ್ತಿ ಆಧಾರಿತ ತರಬೇತಿ ನೀಡುವ ದಿಸೆಯಲ್ಲಿ ನರ್ಸಿಂಗ್ ಕೋರ್ಸಗಳಲ್ಲಿ ವ್ಯಾಸಂಗ ಮಾಡಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಜಿಲ್ಲೆಯ ನರ್ಸಿಂಗ್ ಶಾಲೆಗಳಲ್ಲಿ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ತರಬೇತಿಗೆ ನಿಯೋಜಿಸಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಸರ್ಕಾರ ನಿಗಧಿಪಡಿಸಿದ ಶಾಲಾ ಫೀ ಮತ್ತು ನಿರ್ವಹಣಾ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುತ್ತದೆ.

- **ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ:**

  ₹.2.00ಲಕ್ಷಗಳ ವಾರ್ಷಿಕ ಆದಾಯ ಹೊಂದಿರುವ ಅರ್ಹ ಪರಿಶಿಷ್ಟ ಜಾತಿಗೆ ಸೇರಿದ ಪೋಷಕರ ಮಕ್ಕಳಿಗೆ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ 15 ವಿದ್ಯಾರ್ಥಿ/ನಿಯರಿಗೆ ಪ್ರವೇಶಾವಕಾಶ ಕಲ್ಪಿಸಿ, ಪ್ರವೇಶಾವಕಾಶ ಕಲ್ಪಿಸಿದ ಶಾಲೆಗಳಿಗೆ ವಾರ್ಷಿಕ ಗರಿಷ್ಠ ₹.50,000=00ಗಳನ್ನು ಸಂದಾಯ ಮಾಡಲಾಗುತ್ತಿದೆ.

## ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಕಾರ್ಯಾಲಯ ಬೆಳಗಾವಿ

### 2015–16ನೇ ಸಾಲಿಗೆ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಶಿಷ್ಯವೇತನ/ಪ್ರೋತ್ಸಾಹಧನ ಮಂಜೂರಾತಿ ವಿವರ

| ನಿಗಧಿಪಡಿಸಿದ ಅನುದಾನ | | ಬಿಡುಗಡೆಯಾದ ಅನುದಾನ | | ಖರ್ಚಾದ ಅನುದಾನ | | ಹೆಚ್ಚುವರಿ ಅನುದಾನ | |
|---|---|---|---|---|---|---|---|
| ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| **861.18** | **605.00** | **287.07** | **201.65** | **00** | **00** | **00** | **00** |

**ಷರಾ:** ಶಿಷ್ಯವೇತನ ಮಂಜೂರಾತಿ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸುತ್ತಿರುವುದರಿಂದ ಅರ್ಜಿ ನೊಂದಣಿ ಪ್ರಕ್ರಿಯೆಯು ದಿ: 30–10–2015ರವರೆಗೆ ಇದ್ದು ಮಂಜೂರಾತಿ ಪ್ರಕ್ರಿಯೆ ಪ್ರಾರಂಭವಾಗಿರುವುದಿಲ್ಲವಾದ್ದರಿಂದ ಅನುದಾನವು ಖರ್ಚಾಗಿರುವುದಿಲ್ಲ.

## ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಕಾರ್ಯಾಲಯ ಬೆಳಗಾವಿ

### ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ / ವಸತಿ ಶಾಲೆಗಳ ವಿವರ

| ಅ.ನಂ | ವಿದ್ಯಾರ್ಥಿ ನಿಲಯಗಳ ವಿವರ | ಒಟ್ಟು ಸಂಸ್ಥೆಗಳ ಸಂಖ್ಯೆ | ಒಟ್ಟು ಮಂಜೂರಾತಿ ಸಂಖ್ಯೆ | ಭರ್ತಿಯಾದ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ | ನಿವೇಶನ ಲಭ್ಯತೆ | ಕಟ್ಟಡ ಕಾಮಗಾರಿ ಪ್ರಗತಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಮೆಟ್ರಿಕ ಪೂರ್ವ ವಿದ್ಯಾರ್ಥಿ ನಿಲಯಗಳು | 66 | 4616 | 4352 | 59 | 7 | 7 | – |
| 2 | ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳು | 28 | 2418 | 1410 | 11 | 17 | 07 | 01 |
| 3 | ವಸತಿ ಶಾಲೆಗಳು (1 ರಿಂದ 5ನೇ ತರಗತಿ) | 03 | 375 | 367 | 02 | 01 | 01 | – |
| 4 | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು | 12 | 3000 | 2997 | 10 | 02 | 02 | – |
| 5 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು | 04 | 1000 | 993 | 02 | 02 | 02 | 01 |

# ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಕಾರ್ಯಾಲಯ ಬೆಳಗಾವಿ

## ಬೆಳಗಾವಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಕಛೇರಿ ಮತ್ತು ಸಂಸ್ಥೆಗಳಲ್ಲಿ ಮಂಜೂರಾದ,ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ

| ಅ.ನಂ | ಹುದ್ದೆ | ಗ್ರೂಪ್ | ಮಂಜೂರಾತಿ | ಭರ್ತಿ | ಖಾಲಿ |
|---|---|---|---|---|---|
| 1 | 2 | 3 | 4 | 5 | 6 |
| 1 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | A | 1 | 1 | 0 |
| 2 | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು | B | 10 | 08 | 02 |
| 3 | ಕಛೇರಿ ಅಧೀಕ್ಷಕರು | C | 11 | 02 | 08 |
| 4 | ಅಧೀಕ್ಷಕರು (ವಿಘಯೋ) | C | 1 | 1 | 0 |
| 5 | ಪ್ರ.ದ.ಸ | C | 13 | 11 | 02 |
| 6 | ದ್ವಿ.ದ.ಸ | C | 11 | 07 | 04 |
| 7 | ಸಿ.ಸಿ.ಟಿ | C | 1 | 1 | 0 |
| 8 | ಬೆರಳಚ್ಚುಗಾರರು | C | 10 | 5 | 5 |
| 9 | ವಾಹನ ಚಾಲಕರು | C | 1 | 1 | 0 |
| 10 | ಆಶ್ರಮ ಶಾಲೆ ಶಿಕ್ಷಕರು | C | 15 | 14 | 01 |
| 11 | ಸೀನಿಯರ್ ವಾರ್ಡನ್ | C | 3 | 3 | 0 |
| 12 | ವಾರ್ಡನ್ | C | 85 | 84 | 01 |
| 13 | ಅಡಿಗೆಯವರು | D | 205 | 130 | 75 |
| 14 | ಅಡಿಗೆ ಸಹಾಯಕರು | D | 108 | 65 | 43 |
| 15 | ರಾತ್ರಿ ಕಾವಲುಗಾರರು | D | 25 | 13 | 12 |
| 16 | ಜವಾನರು | D | 14 | 12 | 02 |
| | **ಒಟ್ಟು:–** | | **514** | **358** | **155** |

## ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಕಾರ್ಯಾಲಯ ಬೆಳಗಾವಿ

ಬೆಳಗಾವಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ

30/6/2015 ರಲ್ಲಿದ್ದಂತೆ

| ಅ.ನಂ | ಹುದ್ದೆ | ಗ್ರೂಪ್ | ಮಂಜೂರಾತಿ | ಭರ್ತಿ | ಖಾಲಿ |
|---|---|---|---|---|---|
| 1 | 2 | 3 | 4 | 5 | 6 |
| 1 | ಪ್ರಾಂಶುಪಾಲರು | B | 16 | 7 | 9 |
| 2 | ಕನ್ನಡ ಶಿಕ್ಷಕರು | C | 16 | 16 | 0 |
| 3 | ಇಂಗ್ಲೀಷ್ ಶಿಕ್ಷಕರು | C | 16 | 15 | 1 |
| 4 | ಹಿಂದಿ ಶಿಕ್ಷಕರು | C | 16 | 15 | 1 |
| 5 | ಗಣಿತ ಶಿಕ್ಷಕರು | C | 16 | 11 | 5 |
| 6 | ವಿಜ್ಞಾನ ಶಿಕ್ಷಕರು | C | 16 | 14 | 2 |
| 7 | ಸಮಾಜ ವಿಜ್ಞಾನ ಶಿಕ್ಷಕರು | C | 16 | 12 | 4 |
| 8 | ದೈಹಿಕ ಶಿಕ್ಷಕರು | C | 16 | 14 | 2 |
| 9 | ಸಂಗೀತ ಶಿಕ್ಷಕರು | C | 16 | 15 | 1 |
| 10 | ಸ್ಟಾಫ್ ನರ್ಸ್ | C | 16 | 6 | 10 |
| 11 | ಕಂಪ್ಯೂಟರ್ ಶಿಕ್ಷಕರು | C | 16 | 15 | 1 |
| 12 | ಪ್ರಥಮದರ್ಜೆ ಸಹಾಯಕರು/ಕಂಪ್ಯೂಟರ್ ಆಪರೇಟರ್ | C | 16 | 6 | 10 |
| 13 | ವಾರ್ಡನ್ | C | 16 | 7 | 9 |
| 14 | ಅಡಿಗೆಯವರು | D | 48 | 0 | 48 |
| 15 | ಅಡಿಗೆ ಸಹಾಯಕರು | D | 32 | 0 | 32 |
| 16 | ರಾತ್ರಿ ಕಾವಲುಗಾರರು | D | 32 | 0 | 32 |
| 17 | ಸ್ವಚ್ಛತಾ ಸಿಬ್ಬಂದಿ | D | 48 | 0 | 48 |
| 18 | ಜವಾನರು | D | 16 | 0 | 16 |
| | **ಒಟ್ಟು:-** | | **384** | **153** | **231** |